‘ತುಂಬಾ ಅಲೆದಂತೆ ಕಾಣುತ್ತೀಯ...’ ನಕ್ಕಳವಳು ತಲೆಯ ಮೇಲಿನ ಸೀರೆ ಸೆರಗನು ಬಿಚ್ಚಿ.

‘ಅರೆ, ನೀನು ನನ್ನ ಕನಸಲ್ಲವೆ...’ ಅಚ್ಚರಿ, ಸಡಗರ ಅವನ ಮೊಗದಲ್ಲಿ.

‘ನೀನ್ಯಾರೋ ಕನಸುಗಳಿಗೆ ಬಲೆ ಬೀಸುವ ಹುಚ್ಚು ಬೇಟೆಗಾರನಂತೆ ಕಾಣುತ್ತೀಯ. ಕನಸುಗಳ ಹಿಂದೆ ಬಿದ್ದು ತುಂಬಾ ದಣಿದಿದ್ದೀಯ. ಒಂದು ಕ್ಷಣ ಇರು ಇಲ್ಲೆ, ಕಾನನದ ಒಳ ಹೋಗಿ ಹಿಡಿದು ತರುತ್ತೇನೆ ಒಂದು ಬಟ್ಟಲು ಸಿಹಿ ಜೇನು. ನಿನ್ನ ವ್ಯಾಧಿಗೆ ಜೇನು ಒಳ್ಳೆಯ ಔಷಧಿ...’ ಹೇಳುತ್ತಾ ಅವಳು ನಡೆದಿದ್ದಳು ಮನೆಯ ಹೊರಗೆ.

‘ಬೇಡ ಜೇನು, ಬೇಕೆನಗೆ ನೀನು. ಬರುವೆನು ನಿನ್ನೊಂದಿಗೆ ನಾನೂ...’ ಅವನು ಹೊರ ನಡೆದ. ಬಿರ ಬಿರನೆ ನಡೆದು ಅವಳ ನಡು ಹಿಡಿದ.

ಅವಳು ಬೇರೊಂದು ಕನಸಿಗೆ ಜಿಗಿದಳು. ಅವಳ ಕೈ ಹಿಡಿದು ಅವಳೊಂದಿಗೆ ಅವನೂ ಜಿಗಿದ. ಕಾಡು, ಮನೆ ಇಲ್ಲದಂತಾಗಿ ಅವರು ಕಡಲಿನ ಮೇಲೆ ನಡೆಯುತ್ತಿದ್ದರು. ಅನಂತ ದೂರ ದಿಗಂತ.

‘ನಾವು ಕಡಲ ಮೇಲೆ ನಡೆಯುತ್ತಿದ್ದೇವೆ...’ ಅವನ ಅಚ್ಚರಿಯನ್ನು ಕಂಡು ಅಲೆಗಳು ಕಿಲಕಿಲನೆ ನಡೆದಾಡುತ್ತಿದ್ದವು. ಆ ನಗು ಸುಮಧುರ ಸಂಗೀತವನ್ನು ಸೃಷ್ಟಿಸಿತ್ತು.

‘ಕನಸಿನಲ್ಲಿರುವವರು ಎಲ್ಲಿ ಬೇಕಾದರೂ ನಡೆಯಬಹುದು...’ ಅವನ ಕಣ್ಣಲ್ಲಿ ಕಣ್ಣಿಟ್ಟು ಹೇಳಿದಳು.

‘ನಿನ್ನ ಕಣ್ಣಲ್ಲೆ ಕಡಲು ಮೊರೆಯುತ್ತಿದೆ. ಅಲ್ಲೂ ನಿನ್ನೊಂದಿಗೆ ನಾನು ಹೆಜ್ಜೆಯೂರುತ್ತಿದ್ದೇನೆ...’ ತಾನೂ ಅವಳ ಕಣ್ಣಲ್ಲಿ ಕಣ್ಣಿಟ್ಟು ಉದ್ಗರಿಸಿದನವನು.

‘ಕಡಲಿನಾಳದ ತಳಕ್ಕೆ ಮುಳುಗಬಲ್ಲೆಯಾ ನೀನು. ಅಲ್ಲಿ ನಡೆದು ಅಲೆದಾಡಬಲ್ಲೆಯಾ ನೀನು?...’ ಅವಳ ನಗುವಿನೊಂದಿಗೆ ಹೊರಬಿತ್ತು ಪ್ರಶ್ನೆ.

‘ಏಕೆ?...’ ಕುತೂಹಲದಿಂದ ಪ್ರಶ್ನಿಸಿದ್ದ ಅವನು. ಅವಳನ್ನು ಕ್ಷಣ ಬಿಟ್ಟಿರಲೂ ಒಪ್ಪುತ್ತಿಲ್ಲ ಅವನ ತನು–ಮನ.

‘ಅಲ್ಲಿವೆಯಂತೆ ಮುತ್ತು, ರತ್ನ, ವೈಢೂರ್ಯಗಳ ರಾಶಿ...’ ಅವಳ ಮುಖದಲ್ಲಿ ಬಯಕೆ, ಅಚ್ಚರಿಗಳ ರಾಶಿ.

‘ನನಗೆ ಬೇಡ ಅವೆಲ್ಲ...’ ನಿರ್ಲಿಪ್ತನಾದನವನು.

‘ಮತ್ತೇನು ಬೇಕು ನಿನಗೆ? ಅವೆಲ್ಲವನ್ನೂ ತರಲು ಹೇಳಿದ್ದು ನಿನಗಲ್ಲ, ನನಗೆ...’ ವೈಯ್ಯಾರವೆಲ್ಲ ತುಂಬಿ ತುಳುಕಿ ಕುಲುಕುತ್ತಿತ್ತು ಅವಳ ಮೊಗದಲ್ಲಿ, ಮೊಗದ ನಗೆಯಲ್ಲಿ.

‘ನನಗೆ ನೀನೇ ಸಿರಿ, ಸಂಪತ್ತು...’ ಅವನು ವ್ಯಥೆಗೊಂಡ.

‘ಬಿಡು ನನ್ನ, ನಾನು ನಿನಗಿಂತಲೂ ತುಂಬಾ ಭಿನ್ನ...’ ಅವಳು ನಕ್ಕಳು, ಹಗುರವಾದಳು. ಹಾಕಿದಳು ಮತ್ತೊಂದು ಕನಸಿಗೆ ಕನ್ನ.

ಈಗವಳು ತೇಲುತ್ತಿದ್ದಳು ಆಗಸದಲ್ಲಿ ಹಗುರ ಹಗುರವಾಗಿ! ಮತ್ತಷ್ಟು ಹಗುರವಾಗಿ ಅವನೂ ತೇಲಿ ಬರುತ್ತಿದ್ದ ಅವಳೊಂದಿಗೆ ಜೊತೆ ಜೊತೆಯಾಗಿ. ಭೂಮಿ, ಕಡಲು ಅವರಿಂದ ದೂರ ದೂರ ಬಲು ದೂರ. ಧೀರ, ವೀರ ಸುಂದರಾಂಗ ಸೂರ್ಯ, ಜೀವ ಜಗತ್ತಿನ ಅನನ್ಯ ವೀರ್ಯ. ಕದ್ದು ನಡೆದನು ದೂರ ತಾನೇ ಹೊತ್ತು ಅವರಿಬ್ಬರ ಭಾರ. ಚಂದಿರನೂ ಬಲು ಸುಂದರನೇ, ತಣ್ಣಗಿಟ್ಟಿರುತ್ತಾನೆ ಅನುಕ್ಷಣ ತನ್ನ ಮಂದಿರವನ್ನ. ಕೋಟಿ ಕೋಟಿ ಚುಕ್ಕಿಗಳು, ಸದಾ ಮಿನು ಮಿನುಗುವ ಆಕಾಶ ಬುಟ್ಟಿಗಳು.

‘ನಿಲ್ಲು ಹೋಗುತ್ತಿರುವುದಾದರೂ ಎಲ್ಲಿಗೆ?...’ ಕೇಳಿದ್ದನವನು.

‘ಅದೋ ಅಲ್ಲಿಗೆ...’ ಅವಳು ತೋರಿದಳು ಬೆರಳು. ತಿರುಗಿಸಿದನವನು ತನ್ನ ಕೊರಳು ತೋರಿದ